

# ಶ್ರುತಿ: ಹಾರರ್ ಪ್ರಯೋಗ

ಹಾರರ್ ಸಿನಿಮಾಗಳೆಂದರೆ ಶ್ರುತಿ ಹರಿಹರನ್ ಅವರಿಗೆ ಭಯ! ಆ ಕಾರಣದಿಂದಲೇ ಅವರು ಹಾರರ್ ಸಿನಿಮಾಗಳನ್ನು ನೋಡುವುದಿಲ್ಲ. ಆದರೀಗ, ತಾವೇ ಹಾರರ್ ಕಾಮಿಡಿ ಸಿನಿಮಾದಲ್ಲಿ ನಟಿಸುತ್ತಿದ್ದಾರೆ.

'ಕತ್ತಲೆ ಎಂದರೆ ನನಗೆ ಭಯ. ದೆವ್ವಗಳ ಬಗ್ಗೆ ನಂಬಿಕೆಯೂ ಇದೆ. ಆ ಭಯ ಹೋಗುತ್ತದೇನೋ ನೋಡಬೇಕು ಎಂದು ಸಿನಿಮಾ ಒಪ್ಪಿಕೊಂಡೆ. ನಾವು ಯಾವುದಕ್ಕೆ ಭಯಪಡುತ್ತೇವೊ ಅದನ್ನು ಅನುಭವಿಸಿದರೆ ಆ ಭಯದಿಂದ ಹೊರಬಹುದು ಎಂದು ಎಲ್ಲೋ ಕೇಳಿದ್ದೆ. ಆ ಕಾರಣಕ್ಕಾಗಿ ಹಾರರ್ ಕಾಮಿಡಿ ಸಿನಿಮಾದಲ್ಲಿ ನಟಿಸುತ್ತಿರುವೆ' ಎನ್ನುತ್ತಾರೆ ಶ್ರುತಿ. ಸದ್ಯಕ್ಕಿನ್ನೂ ಈ ಚಿತ್ರಕ್ಕೆ ನಾಮಕರಣ ಆಗಿಲ್ಲ.

ಮಂಜು ಸ್ವರಾಜ್ ಈ ಸಿನಿಮಾದ ನಿರ್ದೇಶಕರು. ಮಂಜು ಅವರಿಗೆ ಹಾರರ್ ಸಿನಿಮಾ ಹೊಸತೇನಲ್ಲ. ಅವರ ನಿರ್ದೇಶನದ ಚೊಚ್ಚಿಲ ಸಿನಿಮಾ 'ಶಿಶಿರ' ಕೂಡ ಹಾರರ್ ಕಥನವೇ. ಈಗ ಮತ್ತೊಮ್ಮೆ ಹಾರರ್ ಕಥೆ ಹೇಳುತ್ತಿದ್ದಾರೆ. ಈ ಚಿತ್ರದಲ್ಲಿ ಶ್ರುತಿ ಜೊತೆಗೆ ಕಾರುಣ್ಯರಾಮ್ ಕೂಡ ಇದ್ದಾರೆ.

ಮಂಜು ಸ್ವರಾಜ್ ಚಿತ್ರದ ಪ್ರಗತಿಯ ಜೊತೆಗೇ ಶ್ರುತಿ ನಟನೆಯ 'ಅಂಬಿ ನಿಂಗೆ ವಯಸ್ಸಾಯ್ತೊ' ಚಿತ್ರ ತೆರೆಕಾಣಲು ಸಿದ್ಧತೆ ನಡೆಸುತ್ತಿದೆ. ಇದರ ಜೊತೆಗೆ, ಚಿತ್ರಮಂದಿರಗಳಿಗೆ ಬರಲು ತವಕಿಸುತ್ತಿರುವ 'ವಿಲನ್' ಚಿತ್ರದ ಗೀತೆಯೊಂದರಲ್ಲೂ ಅವರು ಕಾಣಿಸಿಕೊಂಡಿದ್ದಾರೆ.

# ಕೇಡಿ ಛಾಯೆಯಲ್ಲಿ ಕಿಲಾಡಿ!

ಜಗ್ಗೇಶ್ ಎಂದಕೂಡಲೇ ನಗುವಿನ ನಿರೀಕ್ಷೆಯಲ್ಲಿ ಮುಖದ ಗೆರೆಗಳು ಸಡಿಲವಾಗುತ್ತವೆ. ಆದರೆ, '8 ಎಂ ಎಂ' ಚಿತ್ರದ ಮಾತೇ ಬೇರೆ. ಈ ಚಿತ್ರದಲ್ಲಿ ಜಗ್ಗೇಶ್ ಅವರದು ಖಳನಾಯಕನ ಛಾಯೆಯ ಪಾತ್ರ.

ಇದೇ ಮೊದಲ ಬಾರಿಗೆ ಜಗ್ಗೇಶ್ ತಮ್ಮ ಕಾಮಿಡಿ ಕಿಲಾಡಿ ಇಮೇಜ್‌ಗೆ ವ್ಯತಿರಿಕ್ತವಾದ ಪಾತ್ರದಲ್ಲಿ ನಟಿಸಿದ್ದಾರೆ. ಮೊದಲಿಗೆ ಚಿತ್ರಕಥೆಯ ಬಗ್ಗೆ ಅವರಿಗೆ ಅನುಮಾನ ಇತ್ತಂತೆ. ಆ ಕಾರಣದಿಂದಾಗಿ ತಮ್ಮ ಸ್ವಭಾವಕ್ಕೆ ವಿರುದ್ಧವಾದ ಪಾತ್ರವನ್ನು ಅಳುಕುತ್ತಲೇ ಒಪ್ಪಿಕೊಂಡಿದ್ದಾರೆ. ಈಗ ಚಿತ್ರೀಕರಣ ಮುಗಿದ ಮೇಲೆ ಅವರ ಮನಸ್ಸಿಗೆ ನಿರಾಳ ಅನ್ನಿಸಿದೆ. ತಮ್ಮ ವೃತ್ತಿಜೀವನದ ವಿಭಿನ್ನ ಪಾತ್ರ ಇದಾಗಲಿದೆ ಎನ್ನುವ ವಿಶ್ವಾಸ ಮೂಡಿದೆ.



'8 ಎಂ ಎಂ' ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಜಗ್ಗೇಶ್ ಮುಖದಲ್ಲಿ ಸಂತಸ ಎದ್ದುಕಾಣುತ್ತಿತ್ತು. ಹರಯ ಕಳಕೊಂಡ ತಂದೆಯೊಬ್ಬ ಹಣಕಾಸಿನ ಮುಗ್ಗಟ್ಟಿನ ಪರಿಸ್ಥಿತಿಯನ್ನು ಹೇಗೆ ನಿಭಾಯಿಸುತ್ತಾನೆ ಎನ್ನುವುದು ಚಿತ್ರದ ಕಥೆ. ತಮ್ಮಿಂದ ವಿಭಿನ್ನ ಪಾತ್ರವನ್ನು ಮಾಡಿಸಿರುವ ನಿರ್ದೇಶಕ ಹರಿಕೃಷ್ಣ ಅವರನ್ನು ಜಗ್ಗೇಶ್ ಕೊಂಡಾಡಿದರು.

ಚಿತ್ರದ ನಾಯಕಿ ಮಯೂರಿ ಅವರಿಗೂ ಇದು ತಮ್ಮ ಈವರೆಗಿನ ಸಿನಿಮಾ ಜರ್ನಿಯಲ್ಲಿ ವಿಶಿಷ್ಟ ಅನುಭವ ಅನ್ನಿಸಿದೆ. ಜಗ್ಗೇಶ್‌ಗೆ ಜೋಡಿಯಾಗಿ ನಟಿಸಿದ ಖುಷಿ ಅವರ ಮಾತುಗಳಲ್ಲಿ ಎದ್ದುಕಾಣುತ್ತಿತ್ತು. ವಸಿಷ್ಟಸಿಂಹ ಹಾಗೂ ರಾಕ್‌ಲೈನ್ ವೆಂಕಟೇಶ್ ತಾರಾಗಣದಲ್ಲಿರುವ ಪ್ರಮುಖರು. ಜೂಡಿ ಸ್ಯಾಂಡಿ ಸಂಗೀತ ಸಂಯೋಜನೆಯ ಹಾಡುಗಳು ಯುಟ್ಯೂಬ್ ನಲ್ಲಿ ಜನಪ್ರಿಯವಾಗಿರುವುದು ಚಿತ್ರತಂಡಕ್ಕೆ ಗೆಲುವಿನ ವಿಶ್ವಾಸ ತಂದುಕೊಟ್ಟಿದೆ.